ಕೆ.ಆರ್.ಐ.ಡಿ.ಎಲ್.ನ ಕಾಮಗಾರಿಗಳು

3178 (3384); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ;

ಇ) ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಯಾವ ಕಾಮಗಾರಿಗಳು ಅಪೂರ್ಣಗೊಂಡಿವೆ, ಇದಕ್ಕೆ ಇರುವ ಕಾರಣಗಳ ಮಾಹಿತಿ ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು; (ವಿವರಗಳನ್ನು ನೀಡುವುದು)

ಉ) ಯಾವ ಕಾಮಗಾರಿಗಳ ವಿರುದ್ಧ ಕಳಪೆ ಕಾಮಗಾರಿಗಳೆಂದು ದೂರು ದಾಖಲಿಸಲಾಗಿದೆ? (ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ)

- ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ವರ್ಷವಾರು		
		2012–13	2013–14	2014–15
1	ಬೀದರ್	67	52	5

2	ಜಿರಾದ್	85	61	29
3	ಭಾಲ್ಕಿ	33	50	12
4	ಬಸವಕಲ್ಯಾಣ	36	55	30
5	ಹುಮನಾಬಾದ್	42	43	7
	ಒಟ್ಟು	**263**	**261**	**83**

ಆ)

- ಕಾಮಗಾರಿಗಳ ಪ್ರಸ್ತುತ ಹಂತಗಳ ವಿವರ ಕೆಳಕಂಡಂತಿವೆ.

ಕ್ರ. ಸಂ.	ವರ್ಷವಾರು	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಒಟ್ಟು
1	2012–13	234	29	263
2	2013–14	127	134	261
3	2014–15	10	73	83

ಇ)

- ಕೆಲವು ಕಾಮಗಾರಿಗಳ ಅನುದಾನವು ಕ್ರಿಯಾಯೋಜನೆಯಂತೆ ಹಂತ ಹಂತವಾಗಿ ಬಿಡುಗಡೆಯಾಗಿರುತ್ತದೆ, ಅದರಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಈ)

- ಕೆಲವು ಕಾಮಗಾರಿಗಳಿಗೆ ಅಗತ್ಯ ನಿವೇಶನ ನೀಡುವಲ್ಲಿ ಸಂಬಂಧಿಸಿದ ಇಲಾಖೆಯಿಂದ ವಿಳಂಬವಾಗುತ್ತಿರುವ ಕಾರಣ, ಪ್ರಗತಿ ಕುಂಠಿತವಾಗಿದ್ದು, ಸದರಿ ಇಲಾಖೆಗಳು ನಿವೇಶನ ಪಸ್ತಾಂತರಿಸಿದ ಕೂಡಲೇ ಕಾಮಗಾರಿಗಳನ್ನು ತುರ್ತಾಗಿ ನಿಗಮದ ವತಿಯಿಂದ ಪೂರ್ಣಗೊಳಿಸಲಾಗುವುದು.

ಉ)

- ಯಾವುದೇ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.
- ಕಳಪೆ ಕಾಮಗಾರಿಗಳ ಬಗ್ಗೆ ದೂರು ಬಂದಲ್ಲಿ ತನಿಖಾಧಿಕಾರಿಗಳನ್ನು ಕಳುಹಿಸಿ ತನಿಖಾ ವರದಿಯನ್ನು ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೊಬೈಲ್ ಟವರ್‌ಗಳು

3179 (3385); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಬೀದರ್ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಯಾವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೊಬೈಲ್ ಹಾಗೂ ಇತರೆ ಟವರ್‌ಗಳನ್ನು ನಿರ್ಮಿಸಲು ಪರವಾನಿಗೆ ನೀಡಲಾಗಿದೆ; (ಗ್ರಾಮ ಪಂಚಾಯತಿವಾರು ಸಂಪೂರ್ಣ ಮಾಹಿತಿ ನೀಡುವುದು)

ಇ) ಈ ಟವರ್‌ಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಈ) ಸದರಿ ಟವರ್‌ಗಳಿಂದ ಬಂದ ಆದಾಯದ ಮೊತ್ತವೆಷ್ಟು; (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು)

ಉ) ಈ ಮೊತ್ತವನ್ನು ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಮಾ ಮಾಡಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

ಊ) ಸದರಿ ಮೊತ್ತವನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುವುದು? (ಮಾಹಿತಿ ನೀಡುವುದು)